# ಸುಳ್ಳು ಹೇಳಿದರೆ ಸಿಟ್ಟಾಗಬೇಡಿ..!

■ ಡಾ. ಕೆ. ಜಯಲಕ್ಷ್ಮಿ





ಮಗು ಕುಡಿಯಲೆಂದು ಹಾಲನ್ನು ಇಟ್ಟಿದ್ದೀರಿ. ನಿಮ್ಮ ಕೆಲಸದ ಮಧ್ಯೆ ತಿರುಗಿ ನೋಡಿದಾಗ ಹಾಲೆಲ್ಲಾ ಚೆಲ್ಲಿ ಹೋಗಿದೆ.

'ಇಲ್ಲಿ ಹಾಲು ಚೆಲ್ಲಿದ್ದು ಯಾರು?' ಎಂದು ನೀವು ಕೂಗಿದಾಗ ದೈನ್ಯತೆ ತುಂಬಿದ ಮುಖ, ನೀವು ಕೇಳಿರದಂತಹ ಸುಳ್ಳಿನ ಮಾಲೆ! ಇವು ಮಕ್ಕಳಿಂದ ದೊರಕುವ ಉತ್ತರ.

'ಮಗು ಯಾಕೆ ಸುಳ್ಳು ಹೇಳುತ್ತದೆ' ಎಂದು ಎಂದಾದರೂ ಯೋಚಿಸಿದ್ದೀರಾ? ಮಾಡಿದ ತಪ್ಪಿನಿಂದ ತಪ್ಪಿಸಿಕೊಳ್ಳಲು, ತಪ್ಪನ್ನು ತಿರುಚಲು ಮಗು ಮಾಡುವ ತುಂಟ ಪ್ರಯತ್ನವಿದು. ಮಗು ಸುಳ್ಳು ಹೇಳುತ್ತದೆ ಎಂದು ನೀವು ತೀರಾ ಗಾಬರಿಯಾಗಬೇಕಿಲ್ಲ. ಚಿಕ್ಕಂದಿನಲ್ಲಿ ಇಂತಹ ಸಂದಿಗ್ಧಗಳನ್ನು ತಪ್ಪಿಸಲು ಸುಳ್ಳು ಹೇಳುವ ಮಗು ಮುಂದೆ ಜೀವನಪೂರ್ತಿ ಸುಳ್ಳೇ ಹೇಳುತ್ತದೆ ಎಂಬುದು ಸಾಮಾನ್ಯವಾಗಿ ಪೋಷಕರ ಆತಂಕ. 'ಹಾಲು ಚೆಲ್ಲಿದ್ದು ಯಾರು' ಎಂಬ ಪ್ರಶ್ನೆಗೆ 3 ವರ್ಷದ ವಯಸ್ಸಿನಲ್ಲೇ ಮಗು ಸುಳ್ಳು ಉತ್ತರ ನೀಡಿದರೆ, ದೊಡ್ಡವನಾದ ಮೇಲೆ ಏನೆಲ್ಲಾ ಅನಾಹುತಗಳು ಆಗಬಹುದು ಎಂದು ಹೆತ್ತವರು ಗೊಂದಲಕ್ಕೀಡಾಗುತ್ತಾರೆ.

ಸಾಮಾನ್ಯವಾಗಿ ಎಲ್ಲರ ಮನೆಗಳಲ್ಲೂ ಮಕ್ಕಳು ಸುಳ್ಳು ಹೇಳುತ್ತಾರೆ. ಹಾಗೆಂದು ಅದನ್ನು ತಡೆಯಬಾರದು ಎಂದಲ್ಲ. ಅದಕ್ಕೂ ಕೆಲವು ಕ್ರಮಗಳಿವೆ. ಮಗು ಸುಳ್ಳು ಹೇಳುವುದನ್ನು ಚಿಕ್ಕ ವಯಸ್ಸಿನಲ್ಲೇ ತಡೆಯುವುದು ಹೇಗೆ?

ಮೊದಲನೆಯದಾಗಿ ಮಗು ಏನೇ ಮಾಡಲಿ, ನಿಮ್ಮನ್ನು ನಂಬುವಂತೆ ಮಾಡಿ. ಮಗು ಯಾವ ವಿಷಯದಲ್ಲಿ ಸುಳ್ಳು ಹೇಳಲು ಬಯಸುವುದೋ ಅಲ್ಲಿ ಪರಿಹಾರ ಹುಡುಕುವಲ್ಲಿ ನೀವು ನೆರವಾಗಬೇಕು. ಯಾವುದೇ ತೊಂದರೆ ಇದ್ದರೂ, ಮಗು ನಿಮ್ಮಲ್ಲಿನ ನಂಬಿಕೆಯನ್ನು ಕಳೆದುಕೊಳ್ಳಬಾರದು. ಹಾಲು ಚೆಲ್ಲಿದ್ದರಿಂದ ಹಿಡಿದು ಮನೆಯ ಗಾಜನ್ನು ಮುರಿಯುವವರೆಗೂ ಯಾವುದೇ ತೊಂದರೆಯನ್ನು ಅತಿಯಾದ ಶಿಕ್ಷೆ ಇಲ್ಲದೆ ನೀವು ಪ್ರೀತಿಯಿಂದ ಪರಿಹರಿಸಬಲ್ಲಿರಿ ಎಂಬ ನಂಬಿಕೆ ಮಗುವಿನ ಮನಸ್ಸಿನಲ್ಲಿ ಮೂಡಬೇಕು.

* ಮಗುವಿನ ಯಾವುದೇ ನಡತೆ ಅಥವಾ ಸುಳ್ಳಿಗೆ ನೀವು ಅತಿಯಾಗಿ ಪ್ರತಿಕ್ರಿಯೆ ನೀಡಬೇಡಿ. ಅದರಲ್ಲೂ ವಿಶೇಷವಾಗಿ ಜೋರಾಗಿ ಕೂಗಾಡುವುದು ಅಥವಾ ಹೆದರಿಸುವುದು ಮಾಡಬಾರದು.

* ಬಹಳ ಶಾಂತ ರೀತಿಯಿಂದ ಸ್ನೇಹಿತನಂತೆ ತಪ್ಪಿನ ಬಗ್ಗೆ ಮಗುವಿನ ಜೊತೆ ಮಾತನಾಡಿ, ಪರಿಸ್ಥಿತಿಯನ್ನು ಮಗುವಿಗೆ ಆದಷ್ಟು ಅರ್ಥ ಮಾಡಿಸಲು ಪ್ರಯತ್ನಿಸಿ.

* ಮಗು ತಪ್ಪು ಮಾಡಿ ನಿಜವನ್ನು ಒಪ್ಪಿಕೊಂಡಾಗ ಎಲ್ಲರ ಮುಂದೆ ಮಗುವಿನ ಧೈರ್ಯವನ್ನು ಹೊಗಳಬೇಕು. ಸುಳ್ಳು ಹೇಳುವುದಕ್ಕಿಂತ ಸತ್ಯವನ್ನು ಹೇಳುವುದು ಬಹಳ ಬಲಯುತವಾದದ್ದು ಎಂಬುದನ್ನು ಮಗು ಕಲಿಯಬೇಕು.

* ಇನ್ನು ಮುಂದೆ ಈ ಬಗೆಯ ತಪ್ಪುಗಳು ಆಗದಂತೆ ಮಗುವಿಗೆ ಬುದ್ಧಿ ಹೇಳಿ.

ಬಾಲ್ಯದಲ್ಲಿ ಸುಳ್ಳು ಹೇಳುವುದನ್ನು ಬಹುತೇಕ ಮಕ್ಕಳು ಅಭ್ಯಾಸ ಮಾಡಿಕೊಳ್ಳುತ್ತಾರೆ. ತಾವು ಮಾಡಿದ ತಪ್ಪನ್ನು ಮುಚ್ಚಿಡಲು, ತಾನೊಬ್ಬ ಸೂಪರ್ ಮ್ಯಾನ್ ಎಂದು ನಂಬಿಸಲೂ ಮಕ್ಕಳು ಸುಳ್ಳು ಹೇಳುತ್ತಾರೆ. ತಪ್ಪಿಗೆ ಪರಿಹಾರ ಹುಡುಕುವಲ್ಲಿ ಇದೊಂದು ಸೃಜನಾತ್ಮಕತೆಯ ರೂಪ, ನಿಜ ಗೊತ್ತಾದರೆ ಎಲ್ಲಿ ಶಿಕ್ಷೆ ಹೆಚ್ಚಾಗುವುದೋ ಅಂತಹ ಕಡೆಗಳಲ್ಲಿ ಮಕ್ಕಳು ಹೆಚ್ಚು ಹೆಚ್ಚಾಗಿ ಸುಳ್ಳು ಹೇಳುತ್ತಾರೆ.

ಮಕ್ಕಳು ತಾವೇ ಕಲ್ಪಿಸಿಕೊಂಡ ಕಥೆಗಳಿಗೂ, ಈ ಸುಳ್ಳುಗಳಿಗೂ ವ್ಯತ್ಯಾಸವಿದೆ. ತಪ್ಪನ್ನು ಮುಚ್ಚಿಡಲೂ ಕೆಲವು ಮಕ್ಕಳು ಸುಳ್ಳು ಹೇಳುತ್ತಾರೆ. ಆದರೆ ಕಥೆ ಕಟ್ಟಿ ಹೇಳುವುದರಲ್ಲಿ ಬೇರೆಯವರ ಗಮನವನ್ನು ತನ್ನೆಡೆಗೆ ಸೆಳೆದಿಟ್ಟುಕೊಳ್ಳುವ ಉದ್ದೇಶವಷ್ಟೇ ಇರುತ್ತದೆ.

ನಿಜ ಹೇಳುವುದು ಮಗುವಿಗೆ ಸ್ವಲ್ಪ ಸುಲಭವಾಗುವಂತೆ ಮಾಡಿ. 'ನೀನು ನಿಜ ಹೇಳಿದ್ದಕ್ಕಾಗಿ ನನಗೆ ತುಂಬಾ ಸಂತೋಷವಾಗಿದೆ. ಆದರೆ ನೀನು ತಪ್ಪು ಮಾಡಿದ್ದಕ್ಕಾಗಿ ನನಗೆ ತುಂಬಾ ನೋವಾಗಿದೆ, ನೀನು ಒಳ್ಳೆಯ ಮಗುವಾದ್ದರಿಂದ, ಬುದ್ಧಿವಂತನಾದ್ದರಿಂದ ಇನ್ನು ಮುಂದೆ ನೀನು ಇಂತಹ ತಪ್ಪುಗಳನ್ನು ಮಾಡುವುದಿಲ್ಲ ಎಂಬ ನಂಬಿಕೆ ನನಗಿದೆ' ಎಂದು ಮಗುವಿಗೆ ಬಿಡಿಸಿ ಹೇಳಿ. 'ನೀನೂ ಸುಳ್ಳುಗಾರ' ಎಂದು ಕಟುವಾಗಿ ಟೀಕಿಸಿದರೆ, ಮಗುವಿನ ಸ್ವಾಭಿಮಾನಕ್ಕೆ ಧಕ್ಕೆಯಾಗಿ ಮಗು ಸುಳ್ಳು ಹೇಳುವುದನ್ನು ಬೇಕೆಂದೇ ಹೆಚ್ಚು ಮಾಡುತ್ತದೆ.